ಪ್ರಕೃತಿ

# ಹಸಿರು ಲೋಕ

■ ಚಿತ್ರ ಬರಹ:
**ಗ.ಮ. ತುಂಬೇಮನೆ**





**ಜೋ**ರು ಸೆಖೆಯಾದಾಗ, ಬಿಸಿಲ ಬೇಗೆ ಮಿತಿ ಮೀರಿದಾಗ ತಂಪು ದಿನಗಳನ್ನೊಮ್ಮೆ ನೆನಪಿಸಿಕೊಳ್ಳುವುದು ಒಳ್ಳೆಯದು. ಅದು ಮನಕ್ಕೂ ಮುದ ನೀಡುತ್ತದೆ. ಹಸಿರುಕ್ಕುವ ಭೂಮಿಯನ್ನು ನೆನಪಿಗೆ ತರುತ್ತಾ ಹೋದರೆ ಮನಸ್ಸೂ ತಂಪಾಗುತ್ತದೆ.

ಮಳೆಗಾಲ ಮುಗಿದ ನಂತರದ ಮಲೆನಾಡು ಹಸಿರೋ ಹಸಿರು. ಎಲ್ಲಿ ನೋಡಿದರೂ ವೈವಿಧ್ಯಮಯ ಹಸಿರು. ಹಸಿರಿನಲ್ಲೂ ಎಷ್ಟೊಂದು ವಿಧ! ನೋಡುತ್ತ ನಿಂತರೆ ನಮ್ಮ ಇರುವಿಕೆಯೇ ಮರೆತು ಹೋಗುತ್ತದೆ.

ಅದರಲ್ಲೂ ಭತ್ತದ ಗದ್ದೆಯ ಹಸಿರು ವರ್ಣ ಸಂಯೋಜನೆ, ಯಾವುದೋ ಕಲಾವಿದ ಶಿಸ್ತುಬದ್ಧವಾಗಿ ವರ್ಣ ಚಿತ್ರ ಬಿಡಿಸಿದಂತಿದೆ. ಬಾನಲ್ಲಿ ಮೋಡದ ಓಡಾಟವಿದ್ದರೆ ಅಲ್ಲಲ್ಲಿ ಅದರ ನೆರಳು, ದಟ್ಟ ಹಸಿರಿನ ಸಂಚರಿಸುವ ಚಾಪೆ ಹಾಸಿ ಬಿಡುತ್ತದೆ. ಗದ್ದೆಯ ಪಕ್ಕ ಹುಲ್ಲಿನಲ್ಲಿ ಅರಳುವ ಪುಟ್ಟ ಹಳದಿ ಹೂಗಳ ಸಮೂಹ

(8ನೇ ಪುಟ ನೋಡಿ)